Bee-Keepers' Co-operative Society, Chickmagalur

693. Sri C. M. S. SASTRY (Chickmagalur).—

Will the Minister for Development be pleased to state :—

(*a*) whether any application from Chickmagalur for Registration of a Bee-Keepers' Co-operative Society, has been received ;

(*b*) the time required to register the above Society ?

Sri P. M. NADGOUDA (Minister for Development).—

(*a*) No.

(*b*) Does not arise.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಜೇನು ನೊಣ ಸಾಕುವುದಕ್ಕೆ ಸಂಬಂಧಪಟ್ಟ ಸೊಸೈಟಿಯ ರಿಜಿಸ್ಟ್ರೇಷನ್ ಬಗ್ಗೆ ಯಾವರೀತಿಯ ಅರ್ಜಿಯೂ ಬಂದಿಲ್ಲವೆಂದು ಉತ್ತರದಲ್ಲಿ ಕೊಡಲಾಗಿದೆ, ಇದು ಸತ್ಯಕ್ಕೆ ಬಹಳ ದೂರವಿದೆ. ನಾವು ಅನೇಕ ಬಾರಿ ಜೇನು ನೊಣ ಸಾಕುವ ಸೊಸೈಟಿ ರಿಜಿಸ್ಟ್ರೇಷನ್ ಮಾಡಬೇಕು ಎಂದು ಆಫೀಸಿಗೆ ಹೋಗಿ ಕೇಳಿದಾಗ ರಿಜಿಸ್ಟ್ರೇಷನ್ ಮಾಡದೆ ವಾಪಸು ಕಳಿಸಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎರ್. ಗೌಡ.—ಈ ಸೊಸೈಟಿ ಪ್ರಾರಂಭಿಸಲು ಸರಿಯಾದ ಯಾವ ಪ್ರಪೋಸಲ್ಲೂ ಬಂದಿಲ್ಲ. ಈಗಾಗಲೆ ನಕಲೇಶಪುರದಲ್ಲಿ ಒಂದು ಸಹಕಾರ ಸಂಘ ಇದೆ. ಆದುದರಿಂದ ಚಿಕ್ಕಮಗಳೂರಿನಲ್ಲಿ ಇನ್ನೊಂದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಚಿಕ್ಕಮಗಳೂರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಮತ್ತು ಚೀಫ್ ಕಂಟ್ರೋಲರು ಹಾಸನದ ಡೆಪ್ಯುಟಿ ರಿಜಿಸ್ಟ್ರಾರರ ಆಫೀಸಿಗೆ ಹೋಗಿ ಕೇಳಿದಾಗ ರಿಜಿಸ್ಟ್ರೇಷನ್ ಮಾಡದೆ ತಿರಸ್ಕರಿಸಿರುವುದು ನಿಜವೇ ?

ಶ್ರೀ ಬಿ. ಎರ್. ಗೌಡ.—ಆ ವಿಷಯ ಗೊತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಚಿಕ್ಕಮಗಳೂರು ಡೆವಲಪ್‌ಮೆಂಟ್ ಕೌನ್ಸಿಲ್ ನಕಲೇಶಪುರದಲ್ಲಿ ಒಂದು ಸೊಸೈಟಿಯಿದ್ದರೂ ಕೂಡ ಮೂಡಿಗೆರೆ ಮುಂತಾದ ಸ್ಥಳಗಳಿಗೆ ಬೇಕಾಗಿರುವುದರಿಂದ ಬೇರೆ ಒಂದು ಸೊಸೈಟಿ ಮಾಡಬೇಕೆಂದು ತೀರ್ಮಾನಮಾಡಿಲ್ಲವೇ ?

ಶ್ರೀ ಬಿ. ಎರ್. ಗೌಡ.—ಬೇರೆ ಮಾಡಬೇಕೆಂದು ತೀರ್ಮಾನಮಾಡಿರುವುದು ನಿಜ. ಆದರೆ ಪರಿಶೀಲಿಸಿದಮೇಲೆ ಆರ್ಥಿಕವಾಗಿ ಅದು ಅನ್‌ಎಕನಾಮಿಕರ್, ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನಿಸಲಾಗಿದೆ.

ಶ್ರೀ ಹಂಜಿ ಶಿವಣ್ಣ.—ಈ ಸೊಸೈಟಿ ಸ್ಥಾಪಿಸಬೇಕೆಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ಯಾಪಿಟರ್ ಷೇರಿನ ಬಗ್ಗೆ ವಸೂಲುಮಾಡಿಲ್ಲವೇ ?

ಶ್ರೀ ಬಿ. ಎರ್. ಗೌಡ.—ಅದು ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ ಎ. ಎಚ್. ಜಯಪ್ರಕಾಶ ನಾರಾಯಣ್.—ಸ್ಯಾಪಿ, ಚಿಕ್ಕಮಗಳೂರಲ್ಲಿ ಈ ಸಂಘವನ್ನು ಸ್ಥಾಪಿಸಬೇಕೆಂದು ಜಿಲ್ಲಾಬೋರ್ಡ್ ಮಂಡಲಿ ನಿರ್ಣಯಮಾಡಿರುವುದರಿಂದ ತಾವು ಮಾಡಿರುವ ನಿರ್ಣಯ ಬದಲಾಯಿಸಿ ಅಲ್ಲಿ ಮಾಡುವುದು ರೆಮ್ಯೂನರೇಟಿವ್ ಆಗುವುದಾದರೆ ಅಲ್ಲಿ ಒಂದು ಸಂಘವನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಬಿ. ಎರ್. ಗೌಡ.—ಅದನ್ನು ಪರಿಶೀಲನೆ ಮಾಡಿದ್ದೇವೆ. ಅದು ಅನ್‌ಎಕನಾಮಿಕ್, ರೆಮ್ಯೂನರೇಟಿವ್ ಅಲ್ಲ. ಆದುದರಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಈಗಿರುವ ಸೊಸೈಟಿಯು ಹಾಸನ ಮತ್ತು ಚಿಕ್ಕಮಗಳೂರು—ಈ ಎರಡು ಜಿಲ್ಲೆಗಳ ವ್ಯಾಪ್ತಿಗೂ ಒಳಪಟ್ಟಿರುವುದರಿಂದ ನಕಲೇಶಪುರ, ಬೇಲೂರು ಮತ್ತಿನ್ನಿತರ ತಾಲ್ಲೂಕುಗಳಿಗೆ ಒಂದು ಸೊಸೈಟಿ ಬೇಕಾಗಿರುವುದರಿಂದ ಚಿಕ್ಕಮಗಳೂರು ಜಿಲ್ಲೆಗೇ ಒಂದು

ಸೊಸೈಟಿ ಮಾಡುವುದು ಸೂಕ್ತವಲ್ಲವೇ ? ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ಶೃಂಗೇರಿ ಈ ಭಾಗಗಳಲ್ಲಿ ಜೇನಹುಳ ಹೆಚ್ಚಾಗಿ ಸಾಕುವುದರಿಂದ ಬೇರೆ ಒಂದು ಸೊಸೈಟಿ ಮಾಡುವುದು ಸೂಕ್ತವಲ್ಲವೇ ?

ಶ್ರೀ ಬಿ. ಎರ್. ಗೌಡ.—ಚಿಕ್ಕಮಗಳೂರಿಗೇ ಪ್ರತ್ಯೇಕ ಸಹಕಾರ ಸಂಘವನ್ನು ಮಾಡಿದರೆ ಅದು ಸ್ವಾವಲಂಬಿಯಾಗುವುದಿಲ್ಲ, ಅದರಿಂದ ತೊಂದರೆಯಾಗುತ್ತದೆ, ಮಾಡುವುದಕ್ಕಾಗುವುದಿಲ್ಲ ಎಂದು ಆಗಲೇ ಹೇಳಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಅನ್‌ಎಕನಾಮಿಕ್ ಆಗುತ್ತದೆ ಎಂದು ಹೇಳಿದಿರಿ. ಮೊದಲೇ ಷೇರು ಹಣವನ್ನು ವಸೂಲುಮಾಡಿ ರಿಜಿಸ್ಟ್ರೇಷನ್ ಮಾಡಬೇಕು ಎಂದು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿಯವರ ಆದೇಶದಮೇರೆಗೆ ಈ ಕ್ರಮ ತೆಗೆದುಕೊಂಡು ನಮ್ಮನ್ನು ರಿಜಿಸ್ಟ್ರೇಷನ್ನಿಂಗ್ ಅವಕಾಶ ಕೊಡಬೇಕೆಂದು ಕೇಳಲಲ್ಲವೇ ?

ಶ್ರೀ ಬಿ. ಎರ್. ಗೌಡ.—ಮಾನ್ಯ ಸದಸ್ಯರು ಒತ್ತಾಯಮಾಡುವುದರಿಂದ ಇದನ್ನು ಇನ್ನೊಂದು ಸಲ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Reconstitution of Fisheries Advisory Committee

522. **Sri P. V. AITHALA** (Surathkal).—

Will the Minister of State for Ports and Fisheries be pleased to state:—

(*a*) whether the Mysore State Fisheries Advisory Committee has been reconstituted recently ;

(*b*) the criteria adopted in appointing members for the committee;

(*c*) the reasons for not including the 6 coastal M.L.As. of the District in the Fisheries Advisory Committee newly reconstituted ?

Sri H. C. LINGA REDDY (Minister of State for Fisheries and Ports).—

(*a*) Yes.

(*b*) Persons who are engaged in or are closely connected with or are interested in different aspects of fisheries development including the welfare and socioeconomic problems of fishermen in the different parts of the State are nominated to the Board.

(*c*) Three of the coastal M.L As. and two M.L.Cs. in South Kanara District have been nominated.